ಅವರ ಪ್ರೋತ್ಸಾಹವೂ ಜೊತೆಗೂಡಿ, ಮಂಗಳಾ ತಾವೂ ಎಮ್.ಎಸ್.ಡಬ್ಲ್ಯು. ಡಿಗ್ರಿ ಪಡೆದರು. 2019ರಲ್ಲಿ ಮಂಗಳಾ 'ಮಾಸ್ಟರ್ ಆಫ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್' ಮುಗಿಸಿದರು. ಕಂಪ್ಯೂಟರ್ ಕಲಿಸುವ ವಾರ್ಡನ್ ಆಗಿ, ಕಚೇರಿಯಲ್ಲಿ ಸಹಾಯಕಳಾಗಿ, ಕ್ಯಾಷಿಯರ್ ಆಗಿ, ಗುಮಾಸ್ತಳಾಗಿ, ಲೆಕ್ಕಿಗಳಾಗಿ ಏನೆಲ್ಲ ಕೆಲಸಗಳಲ್ಲಿ ದುಡಿದ ಮಂಗಳಾ ಈಗ ಪ್ರೋಗ್ರಾಮ್ ಮ್ಯಾನೇಜರ್ ಆಗಿ ಅನೇಕ ಪ್ರಾಜೆಕ್ಟ್‌ಗಳನ್ನು ನಿರ್ವಹಿಸುತ್ತಿದ್ದಾರೆ. ಕುಷ್ಠರೋಗ ಮತ್ತು ಅಂಗನ್ಯೂನತೆಗೆ ಒಳಗಾದ ಸುಮಾರು 4000 ರೈತರನ್ನು ಒಳಗೊಂಡ ಯೋಜನೆ ಒಂದಾದರೆ, ಪರಿವರ್ತನೆಯ ಹರಿಕಾರರಾಗಿ ಮಹಿಳೆಯರನ್ನು ಒಳಗೊಂಡ ಯೋಜನೆ ಇನ್ನೊಂದು.

ಸುರೇಶ್ ಅವರಿಗೆ ಚಿಕಿತ್ಸೆ ಬಲು ತಡವಾಗಿ ದೊರೆತ ಕಾರಣ ಅವರ ಎಡಗೈ ಮತ್ತು ಎರಡೂ ಪಾದಗಳಲ್ಲಿ ಸ್ಪರ್ಶಜ್ಞಾನ ನಶಿಸಿದೆ. ಬಲಗೈ ಸ್ವಸ್ಥವಿರುವ ಕಾರಣ, ಎಲ್ಲಕ್ಕೂ ಅವರು ಅದನ್ನೇ ಬಳಸುತ್ತಾರೆ. ಸ್ನಾನಕ್ಕೆ ನೀರು ಕಾಯಿಸಿದಾಗ, ಬಲಗೈಯಿಂದ ಅದರ ಬಿಸಿ ನೋಡುತ್ತಾರೆ. ಉಳಿದಂತೆ ಎಡಗೈ ಮತ್ತು ಪಾದಗಳನ್ನು ಜಾಗರೂಕತೆಯಿಂದ ಕಾಪಾಡಿಕೊಂಡು ಬಂದಿದ್ದಾರೆ. ಮಂಗಳಾ ಅವರಿಗೆ ಬಹುಪಾಲು ಇಂತಹ ಸ್ಪರ್ಶದ ಸಮಸ್ಯೆ ಇಲ್ಲ, ಕಾರಣ ಅವರಿಗೆ ಚಿಕಿತ್ಸೆ ಬೇಗ ಸಿಕ್ಕಿತ್ತು. ಆದರೆ ಒಂದು ಕೈಯಲ್ಲಿ ಕೊಂಚ ನ್ಯೂನತೆ ಉಳಿದು ಬಿಟ್ಟಿದೆ. ಇವೆಲ್ಲವೂ ಬದುಕು ಒಡ್ಡಿದ ಸವಾಲು ಎಂದು ದಿಟ್ಟವಾಗಿ ಸ್ವೀಕರಿಸಿ ಇತರರಿಗೆ ಮಾರ್ಗದರ್ಶಕರಾಗಿದ್ದಾರೆ.

ಇಂದು ಸುರೇಶ್ ಅವರು ಹಲವು ಜವಾಬ್ದಾರಿಗಳನ್ನು ಏಕಕಾಲದಲ್ಲಿ ನಿಭಾಯಿಸುತ್ತಿದ್ದಾರೆ. ಅವರು 'ನ್ಯಾಷನಲ್ ಲೆಪ್ರಸಿ ಎರಾಡಿಕೇಷನ್ ಪ್ರೋಗ್ರಾಮ್'ಗೆ ಮಹಾರಾಷ್ಟ್ರದ 'ಸ್ಟೇಟ್ ಕನ್‌ಸಲ್ಟೆಂಟ್' ಆಗಿದ್ದಾರೆ. ಕುಷ್ಠರೋಗವನ್ನು ಕುರಿತು ಅರಿವು ಮೂಡಿಸಲು ನೇರವಾಗಿ ವೈದ್ಯರೊಡನೆ ಅವರು ಒಡನಾಡುತ್ತಿದ್ದಾರೆ. ಜೊತೆಯಲ್ಲಿಯೇ ಪ್ರೋಗ್ರಾಮ್ ಮ್ಯಾನೇಜರ್ ಆಗಿ ಎರಡು ಪ್ರಾಜೆಕ್ಟ್‌ಗಳ ಮುಖಂಡರಾಗಿದ್ದಾರೆ. 'ಇಟರಪ್ಟಿಂಗ್ ಲೆಪ್ರಸಿ ಟ್ರಾನ್ಸ್‌ಮಿಷನ್ ಇನ್ ಚಂದ್ರಾಪುರ್' ಅದರಲ್ಲೊಂದು ಯೋಜನೆ. ಮಹಾರಾಷ್ಟ್ರದ ಅಮ್ರಾವತಿ ಜಿಲ್ಲೆಗೆ ಹತ್ತಿರವಾದ ಈ ಚಂದ್ರಾಪುರ, ಜಗತ್ತಿನಲ್ಲಿಯೇ ಅತಿ ಹೆಚ್ಚು ಕುಷ್ಠರೋಗಿಗಳಿರುವ ಸ್ಥಳವಾಗಿದೆ. ಕುಷ್ಠರೋಗ ಹರಡುವುದನ್ನು ತಡೆಯಲು ಹೊರಟ ಈ ಯೋಜನೆಯಡಿಯಲ್ಲಿ 7 ಲಕ್ಷದ ಜನಸಂಖ್ಯೆಯನ್ನು ಮನೆಮನೆಗೆ ಹೋಗಿ ಸರ್ವೆ ಮಾಡುತ್ತಿದ್ದಾರೆ.

ಮತ್ತೊಂದು ಪ್ರಾಜೆಕ್ಟ್, ಕುಷ್ಠರೋಗಕ್ಕೆ ಬಲಿಯಾದ ಮಕ್ಕಳನ್ನು ಒಳಗೊಂಡದ್ದು. ಇದು ಆ ಮಕ್ಕಳ ವಿಕಾಸದತ್ತ ಕೇಂದ್ರೀಕರಿಸಿದ ಯೋಜನೆ. ಈ ಯೋಜನೆ ಮೂರು ರಾಜ್ಯಗಳಲ್ಲಿ – ಮಹಾರಾಷ್ಟ್ರದ ಒಂದು ಜಿಲ್ಲೆ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಲದ ಎರಡೆರಡು ಜಿಲ್ಲೆಗಳ ಒಟ್ಟು 1500 ಮಕ್ಕಳನ್ನು ಒಳಗೊಂಡದ್ದಾಗಿದೆ.

ಪ್ರಸ್ತುತ ಸುರೇಶ್ ಮತ್ತು ಮಂಗಳಾ, ಮಹಾರಾಷ್ಟ್ರದ ಅಮ್ರಾವತಿ ಜಿಲ್ಲೆಯ ಕೊಠಾರಾದಲ್ಲಿಯ ಲೆಪ್ರಸಿ ಮಿಷನ್ ಕ್ಯಾಂಪಸ್‌ನಲ್ಲಿ ವಾಸಿಸುತ್ತಿದ್ದಾರೆ. ಇಂದು ಮಂಗಳಾ ಅವರ ತಂದೆ–ತಾಯಿ ಮಗಳ ಮನೆಯಲ್ಲಿ ಉಳಿದು ಸಂಭ್ರಮದಿಂದ ಮೂವರು ಮೊಮ್ಮಕ್ಕಳನ್ನು ನೋಡಿಕೊಳ್ಳಲು ಸಹಾಯಕರಾಗಿದ್ದಾರೆ. ಅನಾಥಾಶ್ರಮಕ್ಕೆ ಬಿಡಲು ಯೋಚಿಸಿದ್ದ ಮಗಳು ಹೆಮ್ಮೆಯ ಉದಾಹರಣೆಯಾದದ್ದಷ್ಟೇ ಅಲ್ಲ, ತನ್ನದಾದ ಸುಂದರವಾದ ಸುಖೀ ಸಂಸಾರವನ್ನೂ ಕಟ್ಟಿಕೊಂಡದ್ದು, ಉನ್ನತ ವ್ಯಾಸಂಗ ಪಡೆದು ಇಂದು ಪ್ರೋಗ್ರಾಮ್ ಮ್ಯಾನೇಜರ್ ಹುದ್ದೆಯನ್ನು ದಕ್ಷವಾಗಿ ನಿಭಾಯಿಸುತ್ತಿರುವುದು ಅವರಿಗೆ ಅಭಿಮಾನದ ವಿಷಯವಾಗಿದೆ. ಮಗನ ಅಭಿವೃದ್ಧಿಯನ್ನು ಅಷ್ಟೇ ಹೆಮ್ಮೆಯಿಂದ ಕಾಣುವ ಸುರೇಶ್ ಅವರ ತಾಯಿ, ಹಳ್ಳಿಯಲ್ಲಿ ವ್ಯವಸಾಯದಲ್ಲಿ ತೊಡಗಿರುವ ತಮ್ಮನ ಜೊತೆಯಲ್ಲಿದ್ದಾರೆ.

ವಿವಾಹ, ಮಕ್ಕಳು, ಉನ್ನತ ವ್ಯಾಸಂಗ ಮತ್ತು ಉದ್ಯೋಗ – ಎಲ್ಲವನ್ನೂ ಸಾಧಿಸಿರುವ ಸುರೇಶ್ ಮತ್ತು ಮಂಗಳಾ ಕುಷ್ಠರೋಗದಾಚೆಗೆ ಸಕಾರಾತ್ಮಕ ಸಾಧ್ಯತೆಗಳ ಬದುಕಿದೆ ಎಂದು ತೋರಿಸಿದ್ದಾರೆ. ಸ್ವತಃ ಉದಾಹರಣೆಯಾಗಿ ಇತರರಿಗೆ ಮಾದರಿಯಾಗಿದ್ದಾರೆ.

'ಕುಷ್ಠರೋಗ ಇಂದು ಸಂಪೂರ್ಣವಾಗಿ ಗುಣವಾಗುವ ಕಾಯಿಲೆ. ಮಲ್ಟಿ ಡ್ರಗ್ ಥೆರಪಿಯ ಮೊದಲ ಡೋಸ್ ಕೊಟ್ಟ ತಕ್ಷಣವೇ ರೋಗ 'ನಾನ್ ಕಂಟೇಜಿಯಸ್' ಆಗುವುದರಿಂದ ಇತರರಿಗೆ ಹರಡುವ ಭಯವಿಲ್ಲ. ಇದು ವಂಶಪಾರಂಪರ್ಯವಾಗಿ ಬರುವುದಲ್ಲ. ಮುಟ್ಟಿದೊಡನೆ ಇತರರಿಗೆ ಹರಡುವುದಲ್ಲ. ಆದರೂ ಅಜ್ಞಾನ ಮತ್ತು ತಾರತಮ್ಯದ ನೀತಿಗಳಿಂದ ಇಂದು ವಿಶ್ವದ ಅರ್ಧಕ್ಕೂ ಹೆಚ್ಚು ಕುಷ್ಠರೋಗಿಗಳು ಭಾರತದಲ್ಲಿದ್ದಾರೆ' ಎಂದು ಸುರೇಶ್ ಒತ್ತಿ ಹೇಳುತ್ತಾರೆ.

ಕುಷ್ಠರೋಗವನ್ನು ಸುಲಭವಾಗಿ ಪತ್ತೆ ಮಾಡಬಹುದು, ಸಂಪೂರ್ಣವಾಗಿ ವಾಸಿಮಾಡಬಹುದು. ಈ ರೋಗಕ್ಕೆ ಉಚಿತವಾಗಿ ಔಷಧಿಗಳು, ಚಿಕಿತ್ಸೆ ಲಭ್ಯ. ಕುಷ್ಠರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಅದರ ಬಗ್ಗೆ ಜಾಗೃತಿ ಮೂಡಿಸುವುದರಿಂದ ಮಾತ್ರ ಸಾಧ್ಯ ಎಂದು ಕತ್ತಲ ಹಾದಿಯಲ್ಲಿ ದೊಂದಿ ಹಿಡಿದು ನಡೆದಿರುವ ದಂಪತಿ ಸುರೇಶ್ ಮತ್ತು ಮಂಗಳಾ ಢೋಂಡ್ಗೇ. ಅವರು ನಡೆದಿರುವ ಹಾದಿ ಕುಷ್ಠರೋಗಿಗಳಿಗೆ ಬೆಳಕು ನೀಡುವಂತಹದ್ದು ಮಾತ್ರವಲ್ಲ; ನಮ್ಮೆಲ್ಲರಿಗೂ ಅರಿವು ನೀಡುವಂತಹದ್ದೂ ಹಾಗೂ ಸೇವೆಯ ಪಾಠ ಮನಗಾಣಿಸುವಂತಹದ್ದೂ ಹೌದು.


'ದಿ ಲೆಪ್ರಸಿ ಮಿಷನ್'ನ 150ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸುರೇಶ್ ಢೋಂಡ್ಗೆ

ಪ್ರತಿಕ್ರಿಯಿಸಿ: feedback@sudha.co.in